ಪ್ರೌಢಶಾಲೆಗಳು) ಗಳಲ್ಲಿ ವಿದ್ಯಾರ್ಥಿಗಳ ಗಣಿತ ಕಲಿಕಾ ಫಲಗಳ ಸುಧಾರಣೆಗಾಗಿ ಶಾಲಾ ಹಂತದಲ್ಲಿ ಗಣಿತ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮವನ್ನು ಕೆಸ್ವೈಪ್ಸ್ ಪ್ರಾಯೋಜಿತ್ವದಲ್ಲಿ ಆಯೋಜಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ರೂ. 49875/-ಗಳನ್ನು ವ್ಯಯಿಸಲಾಗಿರುತ್ತದೆ.

| | |
|---|---|
|  |  |
| ಚಿತ್ರ 37. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗುಂಡಗುರ್ತಿಯಲ್ಲಿ ಜರುಗಿದ ಗಣಿತ ಕಾರ್ಯಾಗಾರ | ಚಿತ್ರ 38. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಜೋಳದಹೆಡಗಿಯಲ್ಲಿ ಜರುಗಿದ ಗಣಿತ ಕಾರ್ಯಾಗಾರದಲ್ಲಿ ಶ್ರೀಮತಿ ಇಂದಿರಾ.ಆರ್, ಕ್ಷೇತ್ರ ಶಿಕ್ಷಣಾಧಿಕಾರಿಗಳು, ದೇವದುರ್ಗ ಇವರು ವಿದ್ಯಾರ್ಥಿಗಳು ಪ್ರದರ್ಶಿಸಿದ ಗಣಿತ ಮಾದರಿಗಳನ್ನು ವೀಕ್ಷಿಸುತ್ತಿರುವುದು. |

## 19. ವಿಜ್ಞಾನ ಸಂವಹನ ಮತ್ತು ಪ್ರಸರಣ ಕಾರ್ಯಕ್ರಮಗಳಡಿ ವಿದ್ಯಾರ್ಥಿಗಳಿಗೆ ಶಾಲಾ ಮಟ್ಟದಲ್ಲಿ ವಿಜ್ಞಾನ ಸ್ಪರ್ಧೆ

ದಿನಾಂಕ 28.12.2023 ರಿಂದ 31.01.2023 ರವರೆಗೆ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ರಾಯಚೂರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಶಾಲಾ ಮಟ್ಟದಲ್ಲಿ ಎಂಟು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ವಿಜ್ಞಾನ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮವನ್ನು ಕೆಸ್ವೈಪ್ಸ್ ಪ್ರಾಯೋಜಿತ್ವದಲ್ಲಿ ಮತ್ತು ಸಂಚಾರಿ ತಾರಾಯದ ಯೋಜನೆಯನ್ನು ನಿರ್ವಹಿಸುತ್ತಿರುವ ತಾರೇ ಜಮೀನ್ ಪರ್ ನ ಸಹಕಾರದಲ್ಲಿ ಆಯೋಜಿಸಲಾಗಿರುತ್ತದೆ.

| | |
|---|---|
|  |  |
| ಚಿತ್ರ 39. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಿಡಗಲದಿನ್ನಿಯಲ್ಲಿ ಹಮ್ಮಿಕೊಂಡ ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮ. | ಚಿತ್ರ 40. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೆ.ಎಮ್.ಸಿ ಗುಂಜಳ್ಳಿಯಲ್ಲಿ ಹಮ್ಮಿಕೊಂಡ ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮ. |

| | |
|---|---|
|  ಚಿತ್ರ 43. ಶ್ರೀ ಅಜೀತ್ ಕುಮಾರ್, ಕ್ಯುರೇಟರ್, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ರಾಯಚೂರು ಇವರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಿರುವುದು. |  ಚಿತ್ರ 44. ಚಟುವಟಿಕೆಗಳಲ್ಲಿ ನಿರತರಾಗಿರುವ ವಿದ್ಯಾರ್ಥಿಗಳು. |

22. **ರಾಷ್ಟ್ರೀಯ ವಿಜ್ಞಾನ ದಿನಾಚರಣೆ -2023 ರ ಅಂಗವಾಗಿ ಎಸ್.ಜಿ.ಜಿ ಶಾಲಾವಿದ್ಯಾರ್ಥಿಗಳಿಗೆ ಪಠ್ಯಾಧಾರಿತ ವಿಜ್ಞಾನ ಪ್ರಯೋಗಗಳ ಪ್ರಾತ್ಯಕ್ಷಿಕೆ ಕಾರ್ಯಕ್ರಮ**

ದಿನಾಂಕ 07.02.2023 ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆ -2023 ರ ಅಂಗವಾಗಿ ಎಸ್.ಜಿ.ಜಿ ಶಾಲಾವಿದ್ಯಾರ್ಥಿಗಳಿಗೆ ಪಠ್ಯಾಧಾರಿತ ವಿಜ್ಞಾನ ಪ್ರಯೋಗಗಳ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ 66 ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳಿಗೆ ರಾಸಾಯನಿಕ ಕ್ರಿಯೆಗಳು, ಬೆಳಕು, ಮುಂತಾದವುಗಳ ಕುರಿತು ಪ್ರಯೋಗಗಳ ಪ್ರಾತ್ಯಕ್ಷಿಕೆ ನಡೆಸಲಾಯಿತು ಮತ್ತು ಜೀವಕ್ರಿಯೆ, ಜೀವವಿಕಾಸದ ಕುರಿತು ಪ್ರದರ್ಶಿಕೆಗಳ ಮೂಲಕ ವಿವರಣೆ ನೀಡಲಾಯಿತು. ಈ ಕಾರ್ಯಕ್ರಮವನ್ನು ಕೆಸ್ಟೆಪ್ಸ್ ಪ್ರಾಯೋಜಿತ್ವದಲ್ಲಿ ಆಯೋಜಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ರೂ. 11084/- ಗಳನ್ನು ವ್ಯಯಿಸಲಾಗಿರುತ್ತದೆ.

| | |
|---|---|
|  ಚಿತ್ರ 45. ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು |  ಚಿತ್ರ 46. ಕುಮಾರಿ ವಿದ್ಯಾ, ಶಿಕ್ಷಣ ಸಹಾಯಕರು ಇವರು ರಾಸಾಯನಿಕ ಕ್ರಿಯೆಗಳಿಗೆ ಸಂಬAಧಿಸಿದ ಪ್ರಯೋಗಗಳನ್ನು ಹಮ್ಮಿಕೊಂಡಿರುವುದು. |

## 23. ರಾಷ್ಟ್ರೀಯ ವಿಜ್ಞಾನ ದಿನಾಚರಣೆ -2023 ರ ಅಂಗವಾಗಿ ಸರ್ಕಾರಿ ಪ್ರೌಢಶಾಲೆ ಮಟಮಾರಿ ವಿದ್ಯಾರ್ಥಿಗಳಿಗೆ ಪಠ್ಯಾಧಾರಿತ ವಿಜ್ಞಾನ ಪ್ರಯೋಗಗಳ ಪ್ರಾತ್ಯಕ್ಷಿಕೆ ಕಾರ್ಯಕ್ರಮ

ದಿನಾಂಕ 10.02.2023 ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆ-2023 ರ ಅಂಗವಾಗಿ ಸರ್ಕಾರಿ ಪ್ರೌಢಶಾಲೆ ಮಟಮಾರಿ ವಿದ್ಯಾರ್ಥಿಗಳಿಗೆ ಪಠ್ಯಾಧಾರಿತ ವಿಜ್ಞಾನ ಪ್ರಯೋಗಗಳ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ 112 ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳಿಗೆ ರಾಸಾಯನಿಕ ಕ್ರಿಯೆಗಳು, ಬೆಳಕು, ಶಕ್ತಿ, ಆವರ್ತನ ಮುಂತಾದವುಗಳ ಕುರಿತು ಪ್ರಯೋಗಗಳ ಪ್ರಾತ್ಯಕ್ಷಿಕೆ ನಡೆಸಲಾಯಿತು ಮತ್ತು ಜೀವಕ್ರಿಯೆ, ಜೀವವಿಕಾಸದ ಕುರಿತು ಪ್ರದರ್ಶಿಕೆಗಳ ಮೂಲಕ ವಿವರಣೆ ನೀಡಲಾಯಿತು ಮತ್ತು ಉರಗಗಳು ಮತ್ತು ಅವುಗಳ ಪಾತ್ರದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಅಫ್ಸರ್ ಹುಸೇನ್ ರವರಿಂದ ಅಧಿವೇಶನ ನಡೆಸಲಾಯಿತು. ಈ ಕಾರ್ಯಕ್ರಮವನ್ನು ಕೆಸ್ಟೆಪ್ಸ್ ಪ್ರಾಯೋಜಿತ್ವದಲ್ಲಿ ಆಯೋಜಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ರೂ. 35572/- ಗಳನ್ನು ವ್ಯಯಿಸಲಾಗಿರುತ್ತದೆ.

| | |
|---|---|
|  |  |
| ಚಿತ್ರ 47. ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಚಿತ್ರ | 48. ಪ್ರೊ.ಸಿ.ಡಿ.ಪಾಟೀಲ, ಗೌರವಾನ್ವಿತ ಸದಸ್ಯರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ರಾಯಚೂರು ಇವರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಿರುವುದು |
|  |  |
| ಚಿತ್ರ 49. ವಿಜ್ಞಾನ ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು. | ಚಿತ್ರ 50. ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ |

## 24. ರಾಷ್ಟ್ರೀಯ ವಿಜ್ಞಾನ ದಿನಾಚರಣೆ -2023 ರ ಅಂಗವಾಗಿ ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳಿಗೆ ಪಠ್ಯಾಧಾರಿತ ವಿಜ್ಞಾನ ಪ್ರಯೋಗಗಳ ಪ್ರಾತ್ಯಕ್ಷಿಕೆ ಕಾರ್ಯಕ್ರಮ

ದಿನಾಂಕ 11.02.2023 ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆ-2023 ರ ಅಂಗವಾಗಿ ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳಿಗೆ ಪಠ್ಯಾಧಾರಿತ ವಿಜ್ಞಾನ ಪ್ರಯೋಗಗಳ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ 20 ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳಿಗೆ ರಾಸಾಯನಿಕ ಕ್ರಿಯೆಗಳು, ಬೆಳಕು, ಶಕ್ತಿ, ಆವರ್ತನ ಮುಂತಾದವುಗಳ ಕುರಿತು ಪ್ರಯೋಗಗಳ ಪ್ರಾತ್ಯಕ್ಷಿಕೆ ನಡೆಸಲಾಯಿತು ಮತ್ತು ಜೀವಕ್ರಿಯೆ, ಜೀವವಿಕಾಸದ ಕುರಿತು ಪ್ರದರ್ಶಿಕೆಗಳ ಮೂಲಕ ವಿವರಣೆ ನೀಡಲಾಯಿತು. ಈ ಕಾರ್ಯಕ್ರಮವನ್ನು ಕೆಸ್ಟೆಪ್ಸ್ ಪ್ರಾಯೋಜಿತ್ವದಲ್ಲಿ ಆಯೋಜಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ರೂ. 1236/- ಗಳನ್ನು ವ್ಯಯಿಸಲಾಗಿರುತ್ತದೆ.

| | |
|---|---|
|  |  |
| ಚಿತ್ರ 51. ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು | ಚಿತ್ರ 52. ಚಟುವಟಿಕೆಗಳಲ್ಲಿ ಪಾಲ್ಗೊಂಡಿರುವ ವಿದ್ಯಾರ್ಥಿಗಳು |

## 25. ಮೂಢನಂಬಿಕೆ ಮತ್ತು ಅಂಧವಿಶ್ವಾಸದ ವಿರುದ್ಧ ಜನಜಾಗೃತಿ ಕಾರ್ಯಕ್ರಮ:

ದಿನಾಂಕ 22.02.2023 ರಂದು ಸಿರವಾರ ತಾಲೂಕಿನ ಅತ್ತನೂರು ಗ್ರಾಮದಲ್ಲಿ ಮೂಢನಂಬಿಕೆ ಮತ್ತು ಅಂಧವಿಶ್ವಾಸದ ವಿರುದ್ಧ ಜನಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಿರವಾರ, ಅತ್ತನೂರು, ಶಾಖಾಪೂರು ಮತ್ತು ಜಕ್ಕಲದಿನ್ನಿ ಗ್ರಾಮದ ರೈತರು ಮತ್ತು ಗೃಹಿಣಿಯರು ಸೇರಿದಂತೆ ಒಟ್ಟು 85 ಜನ ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಪಿ.ಹೆಚ್. ನರಹಟ್ಟಿ, ನಿವೃತ್ತ ಪ್ರಾಚಾರ್ಯರು, ಎಲ್.ವಿ.ಡಿ. ಮಹಾವಿದ್ಯಾಲಯ ಇವರು ಪವಾಡ ಬಯಲು ಅಧಿವೇಶನವನ್ನು ಪ್ರಾಯೋಗಿಕವಾಗಿ ಕೈಗೊಂಡರು ಮತ್ತು ಅದರ ಹಿಂದಿರುವ ವೈಜ್ಞಾನಿಕ ತರ್ಕಗಳನ್ನು ಗ್ರಾಮಸ್ಥರಿಗೆ ಮನದಟ್ಟು ಮಾಡಿದರು. ಅಲ್ಲದೇ, ಆಹಾರ ಕಲಬೆರಕೆ, ಸಾವಯವ ಕೃಷಿಯ ಕುರಿತು ಅಧಿವೇಶನಗಳನ್ನು ಕೈಗೊಳ್ಳಲಾಯಿತು. ಈ

ಕಾರ್ಯಕ್ರಮವನ್ನು ಕೆಸ್ಟೆಪ್ಸ್ ಪ್ರಾಯೋಜಿತ್ವದಲ್ಲಿ ಆಯೋಜಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ರೂ. 29140/- ಗಳನ್ನು ವ್ಯಯಿಸಲಾಗಿರುತ್ತದೆ.

| | |
|---|---|
| <br>ಚಿತ್ರ 53. ಕಾರ್ಯಕ್ರಮದಲ್ಲಿ ಭಾಗವಹಿಸಿದ ಜನರು | <br>ಚಿತ್ರ 54. ಶ್ರೀ ಪಿ.ಹೆಚ್. ನರಹಟ್ಟಿ, ನಿವೃತ್ತ ಪ್ರಾಚಾರ್ಯರು, ಎಲ್.ವಿ.ಡಿ. ಮಹಾವಿದ್ಯಾಲಯ ಇವರು ಪವಾಡ ಬಯಲು ಅಧಿವೇಶನವನ್ನು ಪ್ರಾಯೋಗಿಕವಾಗಿ ಕೈಗೊಂಡಿರುವುದು. |
| <br>ಚಿತ್ರ 55. ಕುಮಾರಿ ವಿದ್ಯಾ, ಶಿಕ್ಷಣ ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ರಾಯಚೂರು ಇವರು ಆಹಾರ ಕಲಬೆರಕೆಯ ಕುರಿತು ಅಧಿವೇಶನವನ್ನು ಕೈಗೊಂಡಿರುವುದು. | <br>ಚಿತ್ರ 56. ಕಾರ್ಯಕ್ರಮದಲ್ಲಿ ಭಾಗವಹಿಸಿದ ಜನರಿಗೆ ಪುಸ್ತಕಗಳ ವಿತರಣೆಯ ದೃಶ್ಯ |

### 26. ರಾಷ್ಟ್ರೀಯ ವಿಜ್ಞಾನ ದಿನಾಚರಣೆ-2023

ದಿನಾಂಕ 28.02.2023 ರಂದು ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಸ್ಟೇಷನ್ ಬಜಾರ್ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತಿಮ್ಮಾಪೂರುಪೇಟೆಯಲ್ಲಿ ಶಾಲಾ ಹಂತದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸ್ಟೇಷನ್ ಬಜಾರ್ ಶಾಲೆಯ 263 ವಿದ್ಯಾರ್ಥಿಗಳು ಮತ್ತು ತಿಮ್ಮಾಪೂರುಪೇಟೆ ಶಾಲೆಯ 234 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಎರಡು ಶಾಲೆಗಳಲ್ಲಿ ಶ್ರೀ ಶಂಶುದ್ದೀನ್, ನಿವೃತ್ತ ಭೌತಶಾಸ್ತ್ರ ಉಪನ್ಯಾಸಕರು, ಎಲ್ ವಿ ಡಿ ಮಹಾವಿದ್ಯಾಲಯ ರಾಯಚೂರು ಇವರು ವಿಶೇಷ ಉಪನ್ಯಾಸ ಕೈಗೊಂಡರು ಮತ್ತು ಎರಡು ಶಾಲೆಯ ವಿದ್ಯಾರ್ಥಿಗಳಿಗೆ ಶಾಲಾ ಹಂತದಲ್ಲಿ ಚಟುವಟಿಕೆಗಳನ್ನು ಕೈಗೊಳ್ಳಲಾಯಿತು. ಈ ಕಾರ್ಯಕ್ರಮವನ್ನು ಕೆಸ್ಟೆಪ್ಸ್ ಪ್ರಾಯೋಜಿತ್ವದಲ್ಲಿ ಆಯೋಜಿಸಲಾಗಿರುತ್ತದೆ.

| | |
|---|---|
|  |  |
| ಚಿತ್ರ 57. ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಸ್ಟೇಷನ್ ಬಜಾರ್ ಶಾಲೆಯಲ್ಲಿ ಶ್ರೀ ಶಂಶುದ್ದೀನ್, ನಿವೃತ್ತ ಭೌತಶಾಸ್ತ್ರ ಉಪನ್ಯಾಸಕರು, ಎಲ್ ವಿ ಡಿ ಮಹಾವಿದ್ಯಾಲಯ ರಾಯಚೂರು ಇವರು ವಿಶೇಷ ಉಪನ್ಯಾಸ ಕೈಗೊಂಡಿರುವುದು. | ಚಿತ್ರ 58. ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಸ್ಟೇಷನ್ ಬಜಾರ್ ಶಾಲೆಯಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಶ್ರೀಮತಿ ಇಂದಿರಾ, ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರು ವಿದ್ಯಾರ್ಥಿಗಳು ಬಿಡಿಸಿದ ವಿಜ್ಞಾನ ರಂಗೋಲಿಗಳನ್ನು ವೀಕ್ಷಿಸುತ್ತಿರುವುದು. |
|  |  |
| ಚಿತ್ರ 59. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತಿಮ್ಮಾಪೂರುಪೇಟೆಯ ವಿದ್ಯಾರ್ಥಿಗಳು ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು. | ಚಿತ್ರ 60. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತಿಮ್ಮಾಪೂರುಪೇಟೆಯ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ದೃಶ್ಯ |

**27. ರಾಷ್ಟ್ರೀಯ ವಿಜ್ಞಾನ ದಿನಾಚರಣೆ-2023 ರ ಅಂಗವಾಗಿ ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ವಿಜ್ಞಾನ ಸ್ಪರ್ಧೆಗಳು/ಚಟುವಟಿಕಗೆಳು**

ರಾಷ್ಟ್ರೀಯ ವಿಜ್ಞಾನ ದಿನಾಚರಣೆ-2023 ರ ಅಂಗವಾಗಿ ಜಿಲ್ಲೆಯ ರಾಯಚೂರು, ಸಿಂಧನೂರು, ಲಿಂಗಸೂಗೂರು, ದೇವದುರ್ಗ ಮತ್ತು ಮಾನ್ವಿ ತಾಲೂಕಿನ ಒಟ್ಟು 50 ಸರ್ಕಾರಿ ಶಾಲೆಗಳಲ್ಲಿ ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ವಿಜ್ಞಾನ ಸ್ಪರ್ಧೆಗಳು/ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಯೋಜನೆ ರೂಪಿಸಲಾಗಿದೆ. ಅದರಂತೆ, ಶಾಲೆಗಳಲ್ಲಿ ವಿಜ್ಞಾನ ರಸಪ್ರಶ್ನೆ, ಪ್ರಬಂಧ, ಆಶುಭಾಷಣ, ವಿಜ್ಞಾನ ವಸ್ತು ಪ್ರದರ್ಶನ, ಚಿತ್ರಕಲೆ, ಪ್ರಾತ್ಯಕ್ಷಿಕೆ ಮುಂತಾದ ಚಟುವಟಿಕೆಗಳನ್ನು ಶಾಲಾ ಹಂತದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಕಾರ್ಯಕ್ರಮದಲ್ಲಿ 12886 ವಿದ್ಯಾರ್ಥಿಗಳು

ಭಾಗವಹಿಸಿರುತ್ತಾರೆ. ಈ ಕಾರ್ಯಕ್ರಮವನ್ನು ಕೆಸ್ಟೆಪ್ಸ್ ಪ್ರಾಯೋಜಿತ್ವದಲ್ಲಿ ಆಯೋಜಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ರೂ. 59800/- ಗಳನ್ನು ವ್ಯಯಿಸಲಾಗಿರುತ್ತದೆ.

| | |
|---|---|
| <br>ಚಿತ್ರ 61. ರಾಯಚೂರು ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗೋನ್ವಾರದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ-2023 ರ ಅಂಗವಾಗಿ ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ವಿಜ್ಞಾನ ಚಟುವಟಿಕಗೆಳು. | <br>ಚಿತ್ರ 62. ರಾಯಚೂರು ತಾಲೂಕಿನ ಸರ್ಕಾರಿ ಪ್ರೌಢಶಾಲೆ ಬಿಜನಗೇರಾದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ-2023 ರ ಅಂಗವಾಗಿ ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ವಿಜ್ಞಾನ ಚಟುವಟಿಕಗೆಳು. |
| <br>ಚಿತ್ರ 63. ಮಾನ್ವಿ ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಷ್ಟೂರಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ-2023 ರ ಅಂಗವಾಗಿ ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ವಿಜ್ಞಾನ ಚಟುವಟಿಕಗೆಳು | <br>ಚಿತ್ರ 64. ಸಿಂಧನೂರು ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಳಬಳ್ಳಾರಿಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ-2023 ರ ಅಂಗವಾಗಿ ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ವಿಜ್ಞಾನ ಚಟುವಟಿಕಗೆಳು |